ಖಾಸಗಿ ಮಹಾವಿದ್ಯಾಲಯಗಳ ಅನುದಾನ ಕಡಿತ

760 (966) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್.(ಚಾಮರಾಜ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಸರ್ಕಾರ ಖಾಸಗೀ ಮಹಾವಿದ್ಯಾಲಯ ಗಳಿಗೆ ನೀಡುತ್ತಿದ್ದ ಅನುದಾನದಲ್ಲಿ ಶೇ. 15 ರಷ್ಟು ಕಡಿತಗೊಳಿಸುವ ನಿರ್ಧಾರವನ್ನು ಕೈಗೊಂಡಿದ್ದು, ಈ ಬಗ್ಗೆ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕವಾಗಿ ಅಸಮಾಧಾನ ವ್ಯಕ್ತವಾಗಿದ್ದು, ಇದನ್ನು ಸರ್ಕಾರ ಕೈ ಬಿಡಬೇಕೆಂದು ಮಷ್ಕರ ಕೈಗೊಂಡಿರುವ ಬಗ್ಗೆ ಸರ್ಕಾರದ ನಿಲುವೇನು?

ಆ) ಈ ನಿರ್ಧಾರವನ್ನು ಸಂಪೂರ್ಣವಾಗಿ ಕೈ ಬಿಡಬೇಕೆಂಬ ಬಗ್ಗೆ ಸರ್ಕಾರದ ನಿಲುವೇನು?

ಡಾ॥ ಬಿ. ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು):

ಅ) ದಿನಾಂಕ 13-2-2001ರ ಆದೇಶದನ್ವಯ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡಲಾಗುತ್ತಿರುವ ಅಣುದಾನದಲ್ಲಿ ಶೇ. 15ರಷ್ಟು ಕಡಿತಗೊಳಿಸಿದ್ದು ಹಾಗೂ ಈ ವ್ಯತ್ಯಾಸವನ್ನು ಆಡಳಿತ ಮಂಡಳಿಯು ತಮ್ಮ ಸ್ವಂತ ಸಂಪನ್ಮೂಲಗಳಿಂದ ಭರಿಸಲು ಸೂಚಿಸಿತ್ತು.

ಅನುದಾನಿತ ಕಾಲೇಜುಗಳಿಗೆ ವೇತನಾನುದಾನದಲ್ಲಿ ಕಡಿತಗೊಳಿಸಿರುವುದರಿಂದ ಶಿಕ್ಷಕರು, ಶಿಕ್ಷಕೇತರರು ಹಿನ್ನೆಲೆಯಲ್ಲಿ ಈ ವಿಷಯವನ್ನು ಸರ್ಕಾರವು ಪುರ್ ಪರಿಶೀಲಿಸಿದೆ. ಈಗ ಸರ್ಕಾರವು ಕಾಲೇಜುಗಳಿಗೆ ಅಂದರೆ ಪದವಿ,ಇಂಜಿನಿಯರಿಂಗೆ ಮತ್ತು ಶಿಕ್ಷಣ ಕಾಲೇಜುಗಳಿಗೆ ವೇತನಾನುದಾನ ಕಡಿತವನ್ನು ಪ್ರಸ್ತುತ ಇರುವ ಸಿಬ್ಬಂದಿ ವೇತನಾನುದಾನವನ್ನು ಕಡಿತಗೊಳಿಸದೆ ಸಂಯುಕ್ತ ಪದವಿ ಕಾಲೇಜುಗಳಿಂದ ಪದವಿ ಪೂರ್ವ ಶಿಕ್ಷಣವನ್ನು ಬೇರ್ಪಡಿಸುವ ಮೂಲಕ ಮತ್ತು ಪ್ರಸ್ತುತ ಖಾಲಿ ಇರುವ ಹುದ್ದೆಗಳನ್ನು ಶಾಶ್ವತ ಅನುದಾನರಹಿತ ಎಂಬುದಾಗಿ ಪರಿಗಣಿಸುವ ಮೂಲಕ ಜಾರಿಗೊಳಿಸಲು ತೀರ್ಮಾನಿಸಿದೆ. ಅದರಂತೆ ದಿನಾಂಕ 1-3-2001 ರಂದು ತತ್ಸಂಬಂಧ ಆದೇಶವೊಂದನ್ನು ಹೊರಡಿಸಿದೆ.

ವೃತ್ತಿ ಶಿಕ್ಷಣ ಸಂಸ್ಥೆಗಳು

761(780) ಶ್ರೀ ಕೆ. ಎನ್. ಸುಬ್ಬಾರೆಡ್ಡಿ(ಬಸವನಗುಡಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999 ರಿಂದ 2001 ಜನವರಿಯವರೆಗೆ ಎಷ್ಟು ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಅನಮತಿನೀಡಲಾಗಿದೆ

ಆ) ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡಿದ ಸಂದರ್ಭದಲ್ಲಿ ಸರ್ಕಾರ ಅನುಸರಿಸಿದ ಮಾರ್ಗಸೂಚಿಯೇನು?

ಇ) ಇನ್ನು ಎಷ್ಟು ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪರವಾನಿಗೆ ಸಂಬಂಧಪಟ್ಟ ಅರ್ಜಿಗಳು ಸರ್ಕಾರದ ಮುಂದಿದೆ?